ಇದು ನಿಮಗೆ ಗೊತ್ತೇ?

- ಹೂವುಗಳು ಎಲ್ಲೆಲ್ಲಿ ಇವೆ ಎಂಬ ಸಂಗತಿಯನ್ನು ಜೇನ್ನೊಣಗಳು ಒಂದು ವಿಶಿಷ್ಟ ಕುಣಿತದಿಂದ ಹೇಳುತ್ತವೆ?
- ಜೇನ್ನೊಣಗಳು ತಮ್ಮ ರೆಕ್ಕೆಯನ್ನು ಸೇಕಂದಿಗೆ 200 ಸಲ ಹಾರಿಸಬಹುದು?
- 50 ಸಾವಿರಕ್ಕೂ ಮಿಕ್ಕಿ ಜೇನ್ನೊಣಗಳು ಒಂದು ಗೂಡಿನಲ್ಲಿರುತ್ತವೆ?

ಮುಂತಾದ ಸಂಗತಿಗಳನ್ನು ತಿಳಿದುಕೊಳ್ಳಲು ಈ ಪುಸ್ತಕವನ್ನು ಓದಬೇಕು!

ಜೇನ್ನೊಣಗಳು



ಜಾಯಸ್ ಮಿಲ್ಟನ್
ಚಿತ್ರಗಳುಃ ಪೀಟ ಮ್ಯುಲ್ಲರ್

ಜೇನ್ನೊಣಗಳು





ಜಾಯಸ್ ಮಿಲ್ಟನ್

ಚಿತ್ರಗಳು: ಪೀಟ ಮ್ಯುಲ್ಲರ್

ಕನ್ನಡಕ್ಕೆ ಪ್ರಭಾಕರ ನಾನಾವಟಿ


ಹೂದೋಟದಲ್ಲಿಯ
ಹೂವುಗಳನ್ನು
ನೋಡುತ್ತಿದ್ದಾಗ ನೀವು
ಜೇನ್ನೊಣಗಳನ್ನು ಕೂಡ
ನೋಡುತ್ತಿರಬಹುದು.




ವಸಂತ ಕಾಲದಲ್ಲಿ
ಹೂದೋಟಗಳೆಲ್ಲ
ಜೇನ್ನೊಣದಿಂದ
ತುಂಬಿರುತ್ತವೆ.



ಈ ಋತುಗಳಲ್ಲಿ ಜೇನ್ನೊಣಗಳಂತಹ ಇತರ ಹುಳಗಳನ್ನು ಕೂಡ ಕಾಣಬಹುದು





ಇರುವೆ, ಚಿಟ್ಟೆ, ನೊಣಗಳಂತೆ ಜೇನ್ನೊಣ ಕೂಡ ಹುಳವೇ. ಎಲ್ಲಾ ಹುಳಗಳಂತೆ, ಅವುಗಳಿಗೆ ಆರು ಕಾಲುಗಳಿವೆ. ಅವುಗಳ ಶರೀರವನ್ನುಮೂರು ಭಾಗಗಳಲ್ಲಿ ವಿಂಗಡಿಸಬಹುದು.

ಆದರೆ ಕೆಲ ಜೇನ್ನೊಣಗಳ ಜಾತಿ ಸಮಾಜಪ್ರಿಯ ಜಾತಿ. ಅವು ಗುಂಪಾಗಿಯೇ ಜೀವಿಸುತ್ತವೆ. ಅವುಗಳದೇ ಆದ ವಸಾಹತು ಇರುತ್ತದೆ.ಈ ವಸಾಹತುಗಳು ಗಿಡಗಳ ಮೇಲೆ, ಅಡವಿಯಲ್ಲಿಯ ಗಿಡಗಳ ಪೊಳ್ಳು ಟೊಂಗೆಗಳಲ್ಲಿ, ಎತ್ತರದ ಇಮಾರತುಗಳ ಹೊರಗೆ ಇರುತ್ತವೆ. ಅದಕ್ಕೆ ಜೇನು ನೊಣದ ಹುಟ್ಟು ಇಲ್ಲವೆ ಜೇನು ನೊಣದ ಗೂಡು ಎಂದು ಕರೆಯುತ್ತಾರೆ.



ಅಡವಿಯಲ್ಲಿಯ ಎಷ್ಟೋ ರೀತಿಯ ಜೆನ್ನೊಣಗಳು ಒಂಟಿಯಾಗಿ ಜೀವಿಸುತ್ತವೆ. ಅವುಗಳಲ್ಲಿಯ ಹೆಣ್ಣು ನೊಣಗಳು ತಮ್ಮದೇ ಆದ ಹುಟ್ಟಿಯಲ್ಲಿ ಇಲ್ಲವೆ ಗೂಡಿನಲ್ಲಿ ಮೊಟ್ಟೆ ಹಾಕುತ್ತವೆ.



ಈ ಕಾಡು ಜೇನ್ನೊಣಗಳು ಯಾವಾಗಲು ಸುತ್ತಲೆಲ್ಲ ಸುಂಯಿಗೊಡುತ್ತಿರುತ್ತವೆ. ಅವು ಬಣ್ಣ ಬಣ್ಣದ ಹೂವುಗಳ ಮೇಲೆ ಅಲೆದಾಡುತ್ತವೆ. ಅವೇನು ಮಾಡುವವು? ಅವು ಹೂವುಗಳಲ್ಲಿಯ ಅಮೃತದಂತಹ ಸಿಹಿಯಾದ ರಸವನ್ನು ಹೀರುತ್ತವೆ. ಜೇನು ನೊಣಗಳು ಈ ಹೂವಿನ ರಸವನ್ನು ಜೇನು ತುಪ್ಪವಾಗಿ ಪರಿವರ್ತಿಸುತ್ತವೆ.



ಈ ಜೇನು ನೊಣವು ಹೂವಿನ ರಸವನ್ನು ಹೀರುತ್ತಲಿದೆ. ಸ್ಟ್ರಾದಂತೆ ಅದರ ನಾಲಿಗೆ ಇದೆ. ಒಂದು ದಿನದಲ್ಲಿ ಸಾವಿರಾರು ಹೂಗಳ ರಸವನ್ನು ಅದು ಹೀರಬಹುದು



ರಾಣಿ ಜೇನ್ನೊಣವು ಮತ್ತೇ ತನ್ನ ಗೂಡಿಗೆ ಹೋಗುತ್ತದೆ. ಉಳಿದ ನೊಣಗಳು ಅದನ್ನು ಮುತ್ತುತ್ತವೆ. ಅವುಗಳಿಗೂ ಕೂಡ ಹೂವಿನ ರಸ ಬೇಕು.ಅವು ಅದರ ಬಾಯಿಯವರೆಗೆ ನಾಲಿಗೆಯನ್ನು ಚಾಚುತ್ತವೆ. ಅದು ಅವುಗಳ ನಾಲಿಗೆ ಮೇಲೆ ರಸವನ್ನು ಉಗುಳುತ್ತದೆ.





ಅದು ಒಂದು ವಿಶಿಷ್ಟ ರೀತಿಯಲ್ಲಿ ಕುಣಿಯುತ್ತದೆ. ಈ ಕುಣಿತವು ಹೂವುಗಳು ಎಲ್ಲಿವೆ ಎಂಬುದನ್ನು ಸೂಚಿಸುತ್ತದೆ. ಆಗ ಎಲ್ಲ ನೊಣಗಳು ಹಾರುತ್ತ ಅಲ್ಲಿ ಹೋಗುತ್ತವೆ. ಅಲ್ಲಿಂದ ಅವು ಹೂವಿನ ರಸವನ್ನು ತೆಗೆದುಕೊಂಡು ಬರುತ್ತವೆ.

ಜೇನ್ನೊಣಗಳು ಹನಿ ಹನಿಯಾಗಿ ರಸವನ್ನು ಕಕ್ಕುತ್ತವೆ. ಈ ರಸವು ಅವುಗಳ ನಾಲಿಗೆಯ ಮೇಲೆ ಒಣಗುತ್ತದೆ. ಉಳಿದ ನೊಣಗಳು ತಮ್ಮ ರೆಕ್ಕೆಯನ್ನು ಹಾರಿಸುತ್ತವೆ. ಅದರ ರಭಸ ಕೂಡ ಸಾಕಷ್ಟಿರುತ್ತದೆ – ಪ್ರತಿ ಸೇಕಂದಿಗೆ ಎರಡು ನೂರು ಸಲ! ಇದು ಕೂಡ ರಸವನ್ನು ಒಣಗಿಸುತ್ತದೆ.

ಕೆಲ ವೇಳೆಯಲ್ಲಿ ಅದು ಒಣಗಿ ನಯವಾಗುತ್ತದೆ. ಅದೇ... ಜೇನು ತುಪ್ಪ!





ಅಂಗಡಿಯಲ್ಲಿಂದ ತಂದು ನಾವು ತಿನ್ನುವ ಜೇನು ತುಪ್ಪ ಅಡವಿಯಲ್ಲಿಯ ಜೇನ್ನೊಣಗಳಿಂದ ಬಂದಿರುವದಿಲ್ಲ. ಅದು ಜೇನು ಸಾಕುವ ಕೃಷಿಕ್ಷೇತ್ರಗಳಿಂದ ಬರುತ್ತದೆ.



ಜೇನ್ನೊಣಗಳು ಮನುಷ್ಯನಿರ್ಮಿತ ಪೆಟ್ಟಿಗೆಗಳಲ್ಲಿ ಗೂಡು ಕಟ್ಟುತ್ತವೆ. ಒಂದು ಪೆಟ್ಟಿಗೆಯಲ್ಲಿ 50 ಸಾವಿರಕ್ಕಿಂತ ಹೆಚ್ಚು ನೊಣಗಳು ಇರಬಹುದು.

ಎಲ್ಲ ಜೇನು ತುಪ್ಪದ ರುಚಿ ಒಂದೇ ಸಮ ಇರಲಿಕ್ಕಿಲ್ಲ. ಬೇರೆ ಬೇರೆ ಹೂಗಳು ಬೇರೆ ಬೇರೆ ರುಚಿಯ ರಸವನ್ನು ಶೇಖರಿಸುತ್ತವೆ. ಇವುಗಳ ವಾಸನೆ ಕೂಡ ಬೇರೆ ರೀತಿಯದಿರುತ್ತದೆ. ಅಮೇರಿಕೆಯಲ್ಲಿ ಕ್ಲೋವ್ಹರ ಜೇನು ತುಪ್ಪ ಲೋಕಪ್ರಿಯವಾಗಿದೆ.











ಜೇನ್ನೊಣಗಳಂತೆ ಒಂದೇ ಸವನೆ ಕೆಲಸ ಮಾಡುತ್ತಿದ್ದಾರೆ ಎಂಬುದನ್ನು ನೀವು ಕೇಳಿರಬಹುದು. ಜೇನ್ನೊಣಗಳ ಗೂಡಿನಲ್ಲಿಯ ಎಲ್ಲ ನೊಣಗಳು ಕೂಡ ಒಂದೇ ಸವನೆ ಕೆಲಸ ಮಾಡುತ್ತಿರುತ್ತವೆ.



ಪ್ರತಿ ಹುಟ್ಟಿನಲ್ಲಿ ಸಾವಿರಾರು ಕೆಲಸಗಾರ ನೊಣಗಳು ಇರುತ್ತವೆ. ನೂರಾರು ಗಂಡು ನೊಣಗಳಿರುತ್ತವೆ. ಮತ್ತು ಒಂದೇ ಮಹಾತಾಯಿ, ರಾಣಿ ಜೇನ್ನೊಣ ಇರುತ್ತದೆ



ಕೆಲಸಗಾರ ನೊಣಗಳಿಗೆ ವಿವಿಧ ರೀತಿಯ ಕೆಲಸಗಳಿರುತ್ತವೆ. ಜೇನು ತುಪ್ಪದ ಹೊರತಾಗಿ ಅವು ಮೇಣವನ್ನು ಕೊಡುತ್ತವೆ. ಈ ಮೇಣ ಅವುಗಳ ಬಾಹ್ಯ ಶರೀರದಿಂದ ಬರುತ್ತದೆ.





ಕೆಲಸಗಾರ ನೊಣಗಳು ಈ ಮೇಣವನ್ನು ಕೋಶ ಮತ್ತು ಗೂಡು ಕಟ್ಟಲು ಉಪಯೋಗಿಸುತ್ತವೆ. ಪ್ರತಿ ಕೋಶಗಳಿಗೆ ಷಟ್ಕೋನ ಆಕಾರದಂತೆ ಆರು ಬದಿಗಳಿರುತ್ತವೆ. ಕೆಲ ಕೋಶಗಳಲ್ಲಿ ಜೇನನ್ನು ಸಂಗ್ರಹಿಸಲಾಗುತ್ತಿದೆ.

ಹೂವಿನ ರಸದ ಜತೆ ಈ ನೊಣಗಳು
ಇನ್ನೊಂದು ಪದಾರ್ಥವನ್ನು
ಹೂದೋಟಗಳಿಂದ ತರುತ್ತವೆ-
ಪರಾಗ ಕಣಗಳು



ಪರಾಗ ಕಣಗಳು ಹಳದಿ ಬಣ್ಣದ
ಪುಡಿಯಂತೆ ಕಾಣುತ್ತವೆ.
ನಿಮಗೆ ಹೂವಿನ ವಾಸನೆ
ನೋಡಬೇಕಾಗಿದೆಯೇ?
ನೀವು ಮೂಗನ್ನು ಹೂವುಗಳ ಸಮೀಪ
ಒಯ್ದಾಗ ಮೂಗಿನ ಮೇಲೆ ಈ ಹಳದಿ
ಪರಾಗ ಕಣಗಳು ಅಂಟಿಕೊಳ್ಳುತ್ತವೆ!



ಜೇನ್ನೊಣಗಳು ಪರಾಗ ಕಣಗಳನ್ನು ತಮ್ಮ ಹುಟ್ಟಿಗೆ ಹೇಗೆ ತೆಗೆದುಕೊಂಡು ಹೋಗುತ್ತವೆ? ಅವುಗಳ ಕಾಲುಗಳಲ್ಲಿ ಒಂದು ರೀತಿಯ "ಚೀಲ" ಗಳಿವೆ. ಅವು ಮೊದಲು ಪರಾಗ ಕಣಗಳನ್ನು ಬಾಯಿಯಲ್ಲಿ ಅಗಿಯುತ್ತವೆ.

ಆ ಮೇಲೆ ಅವುಗಳ ಜಿಗುಟಾದ ಉಂಡೆಗಳನ್ನು ಮಾಡುತ್ತವೆ.






ಆ ಉಂಡೆಗಳನ್ನು ಆ ಮೇಲೆ ತನ್ನ ಕಾಲಿನ ಚೀಲದಲ್ಲಿ ತುಂಬುತ್ತವೆ.



ಆ ಮೇಲೆ ಭುರ್ರನೆ ಹಾರಿ ಹೋಗುತ್ತವೆ.

ಕೆಲಸಗಾರ ಜೇನ್ನೊಣಗಳೆಲ್ಲ ಹೆಣ್ಣು ನೊಣಗಳು. ಗಂಡು ನೊಣಗಳು ಆಕಾರದಲ್ಲಿ ಹೆಣ್ಣು ನೊಣಗಳಿಗಿಂತ ದೊಡ್ಡವು. ಅವುಗಳ ಕಣ್ಣುಗಳು ಕೂಡ ದೊಡ್ಡ ಗಾತ್ರದವು. ಅವು ಮತ್ತು ರಾಣಿ ನೊಣದ ಮಿಲನದಿಂದಾಗಿ ಸಂತತಿ ಹುಟ್ಟುವದು. ಸಂತತಿ ಹುಟ್ಟಿಸುವದೊಂದೇ ಇವುಗಳ ಕೆಲಸ. ರಾಣಿ ನೊಣ ಆಕಾರದಲ್ಲಿ ಗಂಡು ನೊಣ ಮತ್ತು ಕೆಲಸಗಾರ ನೊಣಕ್ಕಿಂತ ದೊಡ್ಡದು.





ರಾಣಿ ಜೇನ್ನೊಣಕ್ಕೆ ಮೊಟ್ಟೆ ಇಡಬೇಕಾಗಿದೆ. ಅದು ಗೂಡಿನಿಂದ ಹೊರಗೆ ಹಾರುವದು. ಗಂಡು ನೊಣಗಳು ಅದರ ಬೆನ್ನಟ್ಟುವವು. ಒಂದೇ ಗಂಡು ನೊಣ ಮಾತ್ರ ಅದರ ಜತೆ ಮಿಲನ ಹೊಂದುವದು. ಮಿಲನದ ನಂತರ ಅದು ಸಾಯುವದು.




ಕೆಲಸಗಾರ ನೊಣಗಳಲ್ಲಿಯ ನರ್ಸ ನೊಣಗಳು ಮರಿ ಹುಳಗಳಿಗೆ ತಿನ್ನುಣ್ಣುಸುತ್ತವೆ. ಮೊದಲು ಹುಳದ ಹಾಲು ಕುಡಿಸುತ್ತವೆ ಮೂರು ದಿನಗಳಾದ ಮೇಲೆ ಮಧು ಮತ್ತು ಪರಾಗ ಕೂಡಿಸಿದ 'ರೊಟ್ಟಿ'ಯನ್ನು ತಿನ್ನಿಸುತ್ತವೆ.

ಇದು ರಾಣಿಗೆ ಮೊಟ್ಟೆ ಇಡುವ ಕಾಲ. ದಿನಾಲು 2 ಸಾವಿರ ಮೊಟ್ಟೆ ಅದು ಇಡುವದು. ಅದು ಖಾಲಿ ಇದ್ದ ಕೋಶಗಳಲ್ಲಿ ಮೊಟ್ಟೆ ಇಡುವದು. ಮೊಟ್ಟೆಗಳಿಂದ ಹುಳಗಳು, ಅವುಗಳಿಂದ ಮುಂದೆ ಕೋಶಜೀವಿಗಳು. ಆಗ ಅವು ಬಿಳಿ ಬಣ್ಣದ ಕ್ರಿಮಿಗಳಂತೆ ಕಾಣುತ್ತವೆ.ಆ ಮೇಲೆ ಅವು ಜೇನ್ನೊಣಗಳಾಗುತ್ತವೆ.



ಮರಿ ಹುಳಗಳು (larvae) ಬೆಳೆಯುತ್ತವೆ. ನರ್ಸ ನೊಣಗಳು ಮೇಣದಿಂದ ಕೋಶಗಳನ್ನು ಮುಚ್ಚುತ್ತವೆ. ಮರಿಹುಳಗಳು ಪ್ಯೂಪೆದಲ್ಲಿ ಬದಲಾಗುತ್ತವೆ. ಅವುಗಳ ಕಪ್ಪು ಕಣ್ಣುಗಳು ದೊಡ್ಡದಾಗುತ್ತವೆ. ಅವುಗಳ ತಿಳುವು ಕಾಲುಗಳು ಬೆಳೆಯುತ್ತವೆ.





ಮೂರು ವಾರಗಳಲ್ಲಿ ಅದು ಬೆಳೆದು ಕೋಶದಿಂದ ಹೊರಬಿದ್ದು ಹೋಗಲು ಅಣಿಯಾಗುತ್ತದೆ. ಹೊರಬಿದ್ದ ಕೂಡಲೆ ಕೆಲಸ ಮಾಡಲು ಸಿದ್ಧವಾಗುತ್ತದೆ. ಅದರ ಮೊದಲನೆ ಕೆಲಸವೆಂದರೆ ಬರಿದಾದ ಕೋಶವನ್ನು ಸ್ವಚ್ಛಗೊಳಿಸುವದು.



ವಯಸ್ಸಾದ ಕೆಲಸಗಾರ ನೊಣಗಳು ಗೂಡನ್ನು ರಕ್ಷಿಸುವ ಕೆಲಸ ಮಾಡುತ್ತವೆ. ಗೂಡಿನಲ್ಲಿ ಬೇರೆ ನೊಣಗಳು ಬಂದು ಜೇನನ್ನು ಕಳವು ಮಾಡುವದನ್ನು ನಿಲ್ಲಿಸುತ್ತವೆ. ಅವುಗಳಲ್ಲಿ ಕಾಳಗ ಉಂಟಾಗುತ್ತದೆ.



ಜೀವವಿರುವವರೆಗೆ ಅವು ಹೋರಾಡುತ್ತವೆ. ಜೇನ್ನೊಣಗಳು ಒಂದೇ ಸಲ ಕಡಿಯುವವು. ಕಡಿದಾದ ಮೇಲೆ ಅದರ ಕುಟುಕು ಮುರಿದು ಹೋಗುತ್ತದೆ. ಆ ಮೇಲೆ ಅದು ಕೂಡಲೇ ಸಾಯುತ್ತದೆ.

ಹಸಿದಿದ್ದ ಕರಡಿ ಕೆಲ ಸಲ ಜೇನು
ಗೂಡುಗಳ ಮೇಲೆ ದಾಳಿಮಾಡುವದು.
ಜೇನ್ನೊಣಗಳು ಅದರ ಮೂಗಿನ
ಮೇಲಿನ ನಯವಾದ ತ್ವಚೆಯನ್ನು
ಕುಟುಕುತ್ತವೆ.



ಓಹ್!
ಕರಡಿ ಓಡಿಹೋಗುತ್ತದೆ.
ಅದು ಅಷ್ಟು ಹಸಿದಿರಲಾರದು !





ಜೇನಿನ ವ್ಯವಸಾಯ ಮಾಡುವವರು ಬಹಳ ಕಾಳಜಿ ತೆಗೆದುಕೊಳ್ಳಬೇಕಾಗುತ್ತದೆ. ಗೂಡಿನ ಹತ್ತಿರ ಹೋಗುವಾಗ ದಪ್ಪ ಕೈಗವಸಗಳನ್ನು ಧರಿಸಬೇಕಾಗುತ್ತದೆ. ತಲೆಯ ಮೇಲೆ ನೊಣಗಳನ್ನು ನಿರೊಧಿಸುವ ಹ್ಯಾಟು ಹಾಕಿಕೊಳ್ಳಬೇಕಾಗುತ್ತದೆ. ಕೆಲವು ಸಲ ಹೊಗೆಯನ್ನು ಹೊತ್ತಿಸಬೇಕಾಗುತ್ತದೆ. ಹೊಗೆಯಿಂದ ನೊಣಗಳಿಗೆ ಏನು ಮಾಡಬೇಕು ಎಂಬುದು ತೋಚುವದಿಲ್ಲ.



ಗೂಡಿನಿಂದ ಜೇನನ್ನು ತೆಗೆಯುವದು ಸುಲಭವಾಗುತ್ತದೆ. ಇಷ್ಟಾದರೂ ಕೆಲವು ವೇಳೆ ಜೇನ್ನೊಣಗಳು ಕಚ್ಚಬಹುದು.

ಕೆಲ ಸಲ ಗೂಡಿನಲ್ಲಿ ಹೆಚ್ಚು ಪ್ರಮಾಣದಲ್ಲಿ ಜೇನ್ನೊಣಗಳು ಇರಬಹುದು. ಬೇಸಿಗೆ ಸುಮಾರಿಗೆ ನರ್ಸ ನೊಣಗಳು ಹೊಸ ರಾಣಿಯ ಆರೈಕೆ ಮಾಡಬಹುದು. ಆ ಮೊಟ್ಟೆಯನ್ನು ದೊಡ್ಡ ಕೋಶದಲ್ಲಿ ಇಡುವರು.ಅದು ಶೇಂಗಾಕಾಯಿಯ ಆಕಾರದ್ದಿರುತ್ತದೆ.






ಈ ಮೊಟ್ಟೆಗೆ ಒಂದು ವಿಶಿಷ್ಟ ರೀತಿಯ ಆಹಾರವನ್ನು ಕೊಡಲಾಗುವದು. ಅದು ವಿಶೇಷ ಫಲಪಾಕ (royal jelly). ಮುಂದಿನ 16 ದಿನಗಳಲ್ಲಿ ಅವುಗಳಿಗೆ ಹೊಸ ರಾಣಿ ದೊರೆಯುವದು.



ಈಗ ಮುದಿ ರಾಣಿ ನೊಣ ಹೊಸ ಆಶ್ರಯವನ್ನು ಹುಡುಕಬೇಕು. ಅದರ ಜತೆ ಸಾವಿರಾರು ನೊಣಗಳು ಹಾರಿ ಹೋಗುತ್ತವೆ. ಅವು ಒಮ್ಮೆಲೆ ಗೂಡಿನಿಂದ ಹೊರಬೀಳುತ್ತವೆ.



ಈ ಜೇನ್ನೊಣಗಳು ಗಿಡದ ಟೊಂಗೆಯ ಮೇಲೆ ವಿಶ್ರಮಿಸುತ್ತವೆ.ಅವು ಒಂದು ಉಂಡೆಯಂತೆ ಕಾಣುತ್ತವೆ.ರಾಣಿ ಇವುಗಳ ಮಧ್ಯದಲ್ಲಿರುವಳು. ಇದು ಜೇನ್ನೊಣಗರ ಜಂಗುಳಿ. ಅದರ ತೂಕ 3 ಕೇಜಿ. ಅದರಲ್ಲಿ ಸಾಕಷ್ಟು ನೊಣಗಳಿವೆ. ಜೇನು ಹಿಡಿಯುವವರಿಗೆ ಕೂಡ ಅವುಗಳನ್ನು ಹಿಡಿಯುವದು ಕಷ್ಟಕರ. ಹಿಡಿಯುವದು ಅದಷ್ಟು ಸುಲಭವಲ್ಲ.

ಜೇನ್ನೊಣಗಳ ಆಯುಷ್ಯ ತೀರ ಕಡಿಮೆ. ಕೆಲಸುಗಾರ ನೊಣಗಳು ಆರು ವಾರ ಬದುಕಬಹುದು. ಚಿಕ್ಕ ನೊಣಗಳು ಮುದಿ ನೊಣಗಳನ್ನು ಗೂಡಿನಿಂದ ಹೊರಹಾಕುವವು.

ಚಳಿಗಾಲದ ಮೊದಲು ಎಲ್ಲ ಗಂಡು ಜೇನ್ನೊಣಗಳನ್ನು ಕೊಲ್ಲಲಾಗುವದು. ಕೆಲವೇ ಜೇನ್ನೊಣಗಳು ಚಳಿಗಾಲದಲ್ಲಿ ಜೀವಂತವಿರಬಹುದು.



ಚಳಿಗಾಲ ಮುಗಿದ ಮೇಲೆ ರಾಣಿ ನೊಣವು ಮೊಟ್ಟೆಯನ್ನಿಡುತ್ತದೆ. ಗೂಡುಗಳು ತರುಣ ನೊಣಗಳಿಂದ ತುಂಬುತ್ತವೆ. ಇದು ಒಳ್ಳೆಯ ಕೆಲಸ. ಜೇನ್ನೊಣಗಳೇ ಹೂವಿನ ಕಂಟಿ ಬೆಳೆಯಲು ಸಹಾಯ ಮಾಡುತ್ತವೆ, ಎಂಬ ಸಂಗತಿ ನಿಮಗೆ ಗೊತ್ತೇ?



ಕೆಲಸುಗಾರ ನೊಣವು ಒಂದು ಹೂವಿನ ಪರಾಗವನ್ನು ಮತ್ತೊಂದು ಹೂವಿಗೆ ಮುಟ್ಟಿಸುವದು. ಆಚ್ಚರಿ ಎನ್ನಿಸಿದರೂ ಹೂವಿನ ಬೀಜಗಳು ಹೀಗೆಯೇ ತಯಾರಾಗುತ್ತವೆ! ಈ ಬೀಜಗಳಿಂದ ಹೂವಿನ ಗಿಡ ಬೆಳೆಯುವದು.





ಜೇನ್ನೊಣಗಳು ಕಾಣಲಿಕ್ಕೆ
ಚಿಕ್ಕದಾಗಿ ಕಾಣಬಹುದು. ಆದರೆ
ನಿಸರ್ಗದ ವ್ಯವಹಾರಗಳಲ್ಲಿ ಅದರ
ಪಾತ್ರ ದೊಡ್ಡದು.